KACD220013672022

Presented on : 15-03-2022
Registered on : 15-03-2022
Decided on : 02-04-2026
Duration : 17D-00M-02Y

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಚಳ್ಳಕೆರೆ.

ಉಪಸ್ಥಿತರುಃ ಶ್ರೀಮತಿ ಹೇಮಾ ಹೆಚ್.ಆರ್.,
ಬಿ.,ಎ. ಎಲ್, ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

ದಿನಾಂಕ 02 ನೇ ಏಪ್ರಿಲ್ 2026

**ಸಿ.ಸಿ.ನಂ.1026/2022**

ಪಿರ್ಯಾದಿದಾರರುಃ ಸರ್ಕಾರದ ಪರವಾಗಿ ಚಳ್ಳಕೆರೆ ಪೊಲೀಸ್.

(ಸಹಾಯ ಸರ್ಕಾರಿ ಅಭಿಯೋಜಕರು)

–ವಿರುದ್ಧ –

ಆರೋಪಿತರು :–

೧. ಮಹಂತೇಶ ಬಿನ್ ತಿಮ್ಮಪ್ಪ, ಸು.೪೦ ವರ್ಷ.
೨. ಪಾರ್ವತಮ್ಮ ಕೋಂ ತಿಮ್ಮಪ್ಪ, (ಮೃತರಾಗಿರುತ್ತಾರೆ)
೩. ಕಲ್ಪನ ಕೋಂ ಮಹಂತೇಶ್, ಸು.೨೮ ವರ್ಷ.

ಆರೋಪಿತರು ನರಹರಿನಗರ, ಚಳ್ಳಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆಯ ವಾಸಿಗಳು.

(೧ ಮತ್ತು ೩ನೇ ಆರೋಪಿತರ ಪರ: ಎ.ರಾಮಕೃಷ್ಣ, ವಕೀಲರು)
(೨ನೇ ಆರೋಪಿಯು ಮೃತರಾಗಿರುತ್ತಾರೆ)

1. ಅಪರಾಧ ಜರುಗಿದ ದಿನಾಂಕ ಃ 26.01.2021

2. ಅಪರಾಧವನ್ನು ವರದಿ ಮಾಡಿದ ದಿನಾಂಕ ಃ 26.01.2021

3. ಆರೋಪಿತರನ್ನು ಬಂಧಿಸಿದ ದಿನಾಂಕ : --

4. ಪಿರ್ಯಾದುದಾರರ ಹೆಸರು : ಸಂಧ್ಯ ಎನ್.

5. ವಿಚಾರಣೆ ಪ್ರಾರಂಭವಾದ ದಿನಾಂಕ : 26.03.2026

6. ವಿಚಾರಣೆ ಮುಕ್ತಾಯವಾದ ದಿನಾಂಕ : 26.03.2026

7. ಆಪಾದನೆಗಳು : ಭಾ.ದಂ.ಸಂ.ಕಲಂ 323, 324, 448, 504, 506 ಸಹವಾಚಕ ಕಲಂ 34

8. ನ್ಯಾಯಾಧೀಶರ ಅಭಿಪ್ರಾಯ : ನಿರ್ದೋಷಿ ಎಂದು ಪರಿಗಣಿಸಿದೆ.

## ತೀರ್ಪು

ಚಳ್ಳಕೆರೆ ಪೊಲೀಸ್ ಠಾಣೆಯ ಉಪನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ ೩೨೩, ೩೨೪, ೪೪೮, ೫೦೪, ೫೦೬ ಸಹವಾಚಕ ಕಲಂ ೩೪ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

2. ಅಭಿಯೋಜನೆ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ–

ದಿನಾಂಕ ೨೬.೦೧.೨೦೨೧ ರಂದು ಚಳ್ಳಕೆರೆ ಪಟ್ಟಣದ ನರಹರಿನಗರದಲ್ಲಿ ಚಾಸಾ.೧ ಮತ್ತು ಚಾಸಾ.೪ ರಿಂದ ೭ ರವರು ಅವರ ವಾಸದ ಮನೆಯಲ್ಲಿದ್ದಾಗ, ಚಾಸಾ.೬ ಮತ್ತು ೧ನೇ ಆರೋಪಿಯ ಮಗನ ಗಲಾಟೆ ವಿಚಾರದಲ್ಲಿ ಚಾಸಾ.೧ ಮತ್ತು ಚಾಸಾ.೪ ರಿಂದ ೭ ರವರ ಮನೆಯ ಬಳಿ ಬಂದು ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. ೧ನೇ ಆರೋಪಿಯು ಕೈಯಲ್ಲಿ ಒಂದು ಕೋಲನ್ನು ಹಿಡಿದುಕೊಂಡು ಚಾಸಾ.೧ ರವರ ಎಡಗೈಗೆ ಹೊಡೆದು ನೋವುಂಟುಪಡಿಸಿರುತ್ತಾರೆ. ೧ನೇ ಆರೋಪಿಯು ಅದೇ ಕೋಲಿನಿಂದ ಚಾಸಾ.೪ ಮತ್ತು ೫ ರವರಿಗೆ ಹೊಡೆದು ನೋವುಂಟುಪಡಿಸಿರುತ್ತಾರೆ. ೨ ಮತ್ತು ೩ನೇ ಆರೋಪಿತರು ಕೈಕಾಲುಗಳಿಂದ ಚಾಸಾ.೧, ೪ ಮತ್ತು ೫ ರವರಿಗೆ ಹೊಡೆದಿರುತ್ತಾರೆ. ಅಷ್ಟರಲ್ಲಿ ಮನೆಯಲ್ಲಿದ್ದ ಚಾಸಾ.೭ ರವರು ಹೊರಗೆ ಬಂದಾಗ, ೧ನೇ ಆರೋಪಿಯು ಕೋಲಿನಿಂದ ಚಾಸಾ.೭ ರವರ ಎಡಗಡೆಯ ಕಿವಿಯ ಬಳಿ ಹೊಡೆದು

ನೋವುಂಟುಪಡಿಸಿರುತ್ತಾರೆ. ೧ನೇ ಆರೋಪಿಯು ಅಲ್ಲಿಂದ ಹೋಗುವಾಗ "ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ, ಸಾಯಿಸುತ್ತೇವೆ" ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ ೩೨೩, ೩೨೪, ೪೪೮, ೫೦೪, ೫೦೬ ಸಹವಾಚಕ ಕಲಂ ೩೪ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ.

3. ದಿನಾಂಕ: ೨೬.೦೧.೨೦೨೧ ರಂದು ಚಾಸಾ.೧ ರವರು ಚಾಸಾ.೧೪ ರವರ ಮುಂದೆ ದೂರನ್ನು ನೀಡಿರುತ್ತಾರೆ. ಚಾಸಾ–೧೪ ರವರು ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ನಂ:೩೪/೨೦೨೧ ನ್ನು ದಾಖಲಿಸಿರುತ್ತಾರೆ ಮತ್ತು ಪ್ರಥಮ ವರ್ತಮಾನ ವರದಿಯನ್ನು ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ರವರಿಗೆ ಹಾಗೂ ತಮ್ಮ ಮೇಲಾಧಿಕಾರಿಗಳಿಗೆ ನಿವೇದಿಸಿ ಕೊಂಡಿರುತ್ತಾರೆ. ತನಿಖಾಧಿಕಾರಿಗಳು ಸದರಿ ದೂರಿನ ಅನ್ವಯ ತನಿಖಾ ಕಾರ್ಯ ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ಮೇಲೆ ತಿಳಿಸಿದ ಅಪರಾಧಗಳಿಗೆ ನ್ಯಾಯಿಕ ದೋಷರೋಪಣಾಪಟ್ಟಿ ಸಲ್ಲಿಸಿದ್ದು, ನ್ಯಾಯಾಲಯವು ಭಾ. ದಂ. ಸಂ. ಕಲಂ ೩೨೩, ೩೨೪, ೪೪೮, ೫೦೪, ೫೦೬ ಸಹವಾಚಕ ಕಲಂ ೩೪ ರಡಿಯಲ್ಲಿ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು.

4. ಆರೋಪಿತರು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಿ, ನ್ಯಾಯಾಲಯದಿಂದ ಜಾಮೀನು ಪಡೆದು ಕೊಂಡಿರುತ್ತಾರೆ. ಭಾ. ದಂ. ಸಂ. ಕಲಂ ೨೦೭ ರಡಿಯಲ್ಲಿ ಆರೋಪಿತರಿಗೆ ದೋಷಾರೋಪಣಾ ಪ್ರತಿ ನೀಡಿದ್ದು, ಆರೋಪಿತರ ಪರ ವಕೀಲರು ಮತ್ತು ಸ.ಸ.ಅ. ರವರ ವಾದವನ್ನು ಆಲಿಸಿದ ನಂತರ ಭಾ. ದಂ. ಸಂ. ಕಲಂ ೩೨೩, ೩೨೪, ೪೪೮, ೫೦೪, ೫೦೬ ಸಹವಾಚಕ ಕಲಂ ೩೪ ರಡಿಯಲ್ಲಿ ದೋಷಾರೋಪಣೆಯನ್ನು ಸಿದ್ದಪಡಿಸಿ ಆರೋಪಿತರಿಗೆ ಓದಿ ಹೇಳಿದ್ದು, ತಾವು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಕೋರಿ ಕೊಂಡಿರುತ್ತಾರೆ. ಪ್ರಕರಣ ಇತ್ಯರ್ಥದಲ್ಲಿದ್ದಾಗ ೨ನೇ ಆರೋಪಿಯು ಮರಣಹೊಂದಿದ್ದಾಗಿ ವರದಿಯಾಗಿದ್ದು, ಆ ಮೂಲಕ ೨ನೇ ಆರೋಪಿಯ ವಿರುದ್ದದ ಪ್ರಕರಣವು ಅಂತ್ಯಗೊಂಡಿರುತ್ತದೆ.

5. ಆರೋಪಿತರು ತಮ್ಮ ಮೇಲೆ ಮಾಡಲಾದ ದೋಷಾರೋಪಣೆಯನ್ನು ಅಲ್ಲಗಳೆದಿರುವುದರಿಂದ ಅಭಿಯೋಜನಾ ಪಕ್ಷದವರು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿರುವಂತೆ ಪ್ರಕರಣವನ್ನು ನಿರೂಪಿಸಲು ಚಾಸಾ.೧, ಚಾಸಾ.೪, ಚಾಸಾ.೫ ಮತ್ತು ಚಾಸಾ.೭ ರವರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಸದರಿ ವಿಚಾರಣೆಯಲ್ಲಿ ಚಾಸಾ.೧, ಚಾಸಾ.೪, ಚಾಸಾ.೫ ಮತ್ತು ಚಾಸಾ.೭ ರವರು ಅಭಿಯೋಜನೆಯ ಪರ ಸಾಕ್ಷ್ಯ ನುಡಿಯದೇ ಪ್ರಕರಣದಲ್ಲಿನ ಸಾರಾಂಶದ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಸದರಿ ಸಾಕ್ಷ್ಯವನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಲ್ಪಟ್ಟಿದ್ದರಿಂದ ಸ.ಸ.ಅ. ರವರು ಉಳಿದ ಅಭಿಯೋಜನ ಪರ ಸಾಕ್ಷ್ಯವನ್ನು ವಿಚಾರಣೆ ಮಾಡಬೇಕೆಂದು ಕೇಳಿದ ಮನವಿಯನ್ನು ತಿರಸ್ಕರಿಸಲಾಯಿತು. ಅಭಿಯೋಜನ ಪರ ಮಂಡಿಸಲಾದ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ತಿರುಳು ಇಲ್ಲದೇ ಇರುವುದರಿಂದ ಭಾ. ದಂ. ಸಂ. ಕಲಂ ೩೧೩ ರಡಿಯಲ್ಲಿ ಆರೋಪಿತರ ಹೇಳಿಕೆ ಏನೂ ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

6. ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

7. ಅಭಿಯೋಜನ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

> (1) ದಿನಾಂಕ ೨೬.೦೧.೨೦೨೧ ರಂದು ಸಂಜೆ ಸುಮಾರು ೫.೦೦ ಗಂಟೆ ಸಮಯದಲ್ಲಿ ಚಳ್ಳಕೆರೆ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಚಳ್ಳಕೆರೆ ಪಟ್ಟಣದ ನರಹರಿ ನಗರದಲ್ಲಿ ಚಾಸಾ.೧ ಮತ್ತು ಚಾಸಾ.೪ ರಿಂದ ಚಾಸಾ.೭ ರವರು ಅವರ ಮನೆಯಲ್ಲಿದ್ದಾಗ, ಆರೋಪಿತರು ಸಮಾನ ಉದ್ದೇಶದಿಂದ ಮನೆಯ ಬಳಿ ಬಂದು ಚಾಸಾ.೬ ಮತ್ತು ೧ನೇ ಆರೋಪಿಯ ಮಗ ಮಣಿ ರವರು ಜಗಳ ಮಾಡಿಕೊಂಡಿದ್ದರ ವಿಚಾರವಾಗಿ ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನ ಮಾಡಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ

೫೦೪ ಸಹವಾಚಕ ಕಲಂ ೩೪ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(2) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.೬ ರವರ ಮನೆಯ ಬಳಿ ಬಂದು ೧ನೇ ಆರೋಪಿಯು ಚಾಸಾ.೬ ರವರ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೪೪೮ ಸಹವಾಚಕ ಕಲಂ ೩೪ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(3) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.೬ ರವರ ಮನೆಯ ಬಳಿ ಬಂದು, ೧ನೇ ಆರೋಪಿಯು ಸ್ವ ಇಚ್ಛೆಯಿಂದ ಚಾಸಾ.೧, ಚಾಸಾ.೪, ಚಾಸಾ.೫ ಮತ್ತು ಚಾಸಾ.೬ ರವರಿಗೆ ಕೋಲಿನಿಂದ ಹೊಡೆದು ನೋವುಂಟುಪಡಿಸಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೩೨೪ ಸಹವಾಚಕ ಕಲಂ ೩೪ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(4) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.೬ ರವರ ಮನೆಯ ಬಳಿ ಬಂದು, ೨ ಮತ್ತು ೩ನೇ ಆರೋಪಿತರು ಸ್ವ ಇಚ್ಛೆಯಿಂದ ಚಾಸಾ.೧, ೪ ಮತ್ತು ೫ ರವರಿಗೆ ಕೈಕಾಲುಗಳಿಂದ ಹೊಡೆದು ನೋವುಂಟುಪಡಿಸಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೩೨೩ ಸಹವಾಚಕ ಕಲಂ ೩೪ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(5) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.೧, ಚಾಸಾ.೪, ಚಾಸಾ.೫ ಮತ್ತು ಚಾಸಾ.೬ ರವರಿಗೆ "ಇಷ್ಟಕ್ಕೆ ಬಿಡುವುದಿಲ್ಲ ಪ್ರಾಣ ತೆಗೆಯುತ್ತೇವೆ" ಎಂದು ಪ್ರಾಣ ಬೆದರಿಕೆ ಹಾಕಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ

೫೦೬ ಸಹವಾಚಕ ಕಲಂ ೩೪ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(6) ಯಾವ ಆದೇಶ?

**8.** ಈ ಮೇಲಿನ ಅಂಶಗಳಿಗೆ ನ್ಯಾಯಾಲಯ ಈ ಕೆಳಕಂಡಂತೆ ಉತ್ತರಿಸುತ್ತದೆ:–

ಅಂಶ ನಂ.1 ಃ ನಕಾರಾತ್ಮಕವಾಗಿ,

ಅಂಶ ನಂ.2 ಃ ನಕಾರಾತ್ಮಕವಾಗಿ,

ಅಂಶ ನಂ.3 ಃ ನಕಾರಾತ್ಮಕವಾಗಿ,

ಅಂಶ ನಂ.4 ಃ ನಕಾರಾತ್ಮಕವಾಗಿ,

ಅಂಶ ನಂ.5 ಃ ನಕಾರಾತ್ಮಕವಾಗಿ,

ಅಂಶ ನಂ.6 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

<u>ಕಾರಣಗಳು</u>

9. <u>ಅಂಶ ನಂ.೧ ರಿಂದ ೫</u> – ಈ ಅಂಶಗಳು ಒಂದನ್ನೊಂದು ಅವಲಂಬಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆಯ ಅವಶ್ಯಕತೆ ಇದ್ದು, ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನಾ ಪಕ್ಷದವರು ಆರೋಪಿತರು ಚಾಸಾ.೧, ಚಾಸಾ.೪, ಚಾಸಾ.೫ ಮತ್ತು ಚಾಸಾ.೭ ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು, ಅವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ, ಅವರಿಗೆ ಕೈಕಾಲುಗಳಿಂದ ಮತ್ತು ಕೋಲಿನಿಂದ ಹೊಡೆದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ–೧ ರವರು ನೀಡಿದ ದೂರಿನ ಮೇರೆಗೆ ಪ್ರಕರಣವನ್ನು ದಾಖಲಾಸಿಕೊಳ್ಳಲಾಗಿದೆ.

11. ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಮಾಡಲಾದ ಆಪಾದನೆಗಳನ್ನು ನಿರೂಪಿಸಲು ಅಭಿಯೋಜನಾ ಪಕ್ಷದವರು ದೂರು ನೀಡಿದ ಮತ್ತು ನೊಂದ ಸಾಕ್ಷಿಯಾದ ಚಾಸಾ.೧ ರವರನ್ನು ಪ್ರಾಸಾ.೧ ಎಂದು, ನೊಂದ ಸಾಕ್ಷಿದಾರರಾದ ಚಾಸಾ.೪, ಚಾಸಾ.೫ ಮತ್ತು ಚಾಸಾ.೭ ರವರನ್ನು ಪ್ರಾಸಾ.೨ ರಿಂದ ೪ ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಸದರಿ ಪ್ರಾಸಾ.೧ ರಿಂದ ೪

ರವರು ಅಭಿಯೋಜನಾ ಪರವಾಗಿ ಸಾಕ್ಷ್ಯ ನುಡಿಯದೆ ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಎಂದಿಗೂ ತನಗೆ ಮತ್ತು ಚಾಸಾ.೪, ೫ ಮತ್ತು ೭ ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ, ಕೈಕಾಲುಗಳಿಂದ ಹಲ್ಲೆ ಮಾಡಿರುವುದಿಲ್ಲ, ಯಾವುದೇ ವಸ್ತುವಿನಿಂದ ಹಲ್ಲೆ ಮಾಡಿರುವುದಿಲ್ಲ, ಪ್ರಾಣ ಬೆದರಿಕೆ ಹಾಕಿರುವುದಿಲ್ಲ, ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಾಸಾ.೧ ರವರು ಪೋಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ, ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿರುವುದಿಲ್ಲ, ನಿ.ಪಿ.೧–ದೂರು ಮತ್ತು ನಿ.ಪಿ.೨–ಮಹಜರ್‌ನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಭಿಯೋಜನೆಯವರು ಪ್ರಾಸಾ.೧ ರಿಂದ ೪ ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

12. ಆರೋಪಿತರ ಮೇಲಿನ ಆರೋಪವನ್ನು ಸಾಬೀತುಪಡಿಸಲು ಅಭಿಯೋಜನೆಯು ಪ್ರಾಸಾ.೧ ರಿಂದ ೪ ರವರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಿದ್ದರೂ, ಸದರಿ ಪ್ರಾಸಾ.೧ ರಿಂದ ೪ ರವರ ಸಾಕ್ಷ್ಯದಲ್ಲಿ ಆರೋಪಿತರು ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿರುವ ಬಗ್ಗೆಯಾಗಲೀ, ಪ್ರಾಸಾ.೧ ರಿಂದ ೪ ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದಿರುವ ಬಗ್ಗೆಯಾಗಲೀ, ಕೋಲು ಮತ್ತು ಕೈಕಾಲುಗಳಿಂದ ಹೊಡೆದ ಬಗ್ಗೆಯಾಗಲೀ, ಪ್ರಾಣ ಬೆದರಿಕೆ ಹಾಕಿರುವ ಬಗ್ಗೆಯಾಗಲೀ ಕಂಡು ಬಂದಿರುವುದಿಲ್ಲ.

13. ಪ್ರಾಸಾ.೧ ರಿಂದ ೪ ರವರನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸಾವಾಲಿಗೊಳಪಡಿಸಿದಾಗಿಯೂ ಸಹ ಪ್ರಾಸಾ.೧ ರಿಂದ ೪ ರವರು ಆರೋಪಿತರ ವಿರುದ್ಧ ದೋಷಾರೋಪಣೆಯಲ್ಲಿ ಹೇಳಿದಂತೆ ನುಡಿಯಲು ವಿಫಲರಾಗಿರುತ್ತಾರೆ. ಹಾಗಾಗಿ ಪ್ರಾಸಾ.೧ ರಿಂದ ೪ ರವರ ಸಾಕ್ಷ್ಯ ಅಭಿಯೋಜನಾ ಪಕ್ಷಕ್ಕೆ ಆರೋಪಿತರ ವಿರುದ್ಧ ಆರೋಪಗಳನ್ನು ಸಿದ್ಧಪಡಿಸಲು ಸಹಕಾರಿಯಾಗಿರುವುದಿಲ್ಲ.

14. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತನಗೆ ಗಾಯವನ್ನುಂಟು ಮಾಡಿದಂತಹ ಅಥವಾ ತೊಂದರೆಯನ್ನು ಮಾಡಿದಂತಹ ವ್ಯಕ್ತಿಯ ಪರವಾಗಿ ಸಾಕ್ಷ್ಯವನ್ನು ನುಡಿಯುವುದಿಲ್ಲ. ಆದರೆ ಈ ಪ್ರಕರಣದಲ್ಲಿ ಪ್ರಾಸಾ.೧ ರಿಂದ ೪ ರವರು ತಮ್ಮ ಸಾಕ್ಷ್ಯದಲ್ಲಿ ದೋಷಾರೋಪಣೆಯ ವಿರುದ್ಧವಾಗಿ ಹಾಗೂ ಆರೋಪಿತರ ಪರವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ.೧ ರಿಂದ ೪ ರವರು ತಮ್ಮ ಹೇಳಿಕೆಯ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿದ್ದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕೆಂಬ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಳ್ಳಿಹಾಕಲಾಗಿರುತ್ತದೆ. ಈ ಪ್ರಕರಣದಲ್ಲಿ, ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿರುವಂತಹ ಯಾವುದೇ ಅಪರಾಧ ಮಾಡಿರುವುದು ಕಂಡು ಬರುವುದಿಲ್ಲ. ಈ ಪ್ರಕರಣದಲ್ಲಿ ಲಭ್ಯವಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಪರಿಗಣಿಸಿದಾಗ ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಸಂಶಯಾತೀತವಾಗಿ ಸಿದ್ಧಪಡಿಸಲು ವಿಫಲರಾಗಿರುತ್ತಾರೆ. ಅಪರಾಧಿಕ ತತ್ವಗಳ ಪ್ರಕಾರ ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯ ಪ್ರಕರಣಗಳ ಮೇಲೆ ಸಂಶಯ ಉದ್ಭವಿಸಿದರೆ ಸದರಿ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಬೇಕೆಂದು ಇರುತ್ತದೆ. ಈ ಕಾರಣಗಳಿಂದಾಗಿ ಅಂಶ ೧ ರಿಂದ ೫ ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

15. ಅಂಶ ನಂ.೬– ಮೇಲೆ ಮಾಡಲಾದ ವಿವರವಾದ ಚರ್ಚೆ ಹಾಗೂ ಕಾರಣಗಳಿಂದ ಈ ಕೆಳಕಂಡಂತೆ ನ್ಯಾಯಾಲಯವು ಆದೇಶ ಮಾಡಿರುತ್ತದೆ:–

**ಆ ದೇ ಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ ೨೪೮(೧) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ ೩೨೩, ೩೨೪, ೪೪೮, ೫೦೪, ೫೦೬ ಸಹವಾಚಕ ಕಲಂ ೩೪ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ ೪೩೭(ಎ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು ೬ ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು ಎಂದು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಸ್ವತ್ತು ಪಟ್ಟಿ ಸಂಖ್ಯೆ ೨೮/೨೦೨೧ ರೀತ್ಯಾ ಅಮಾನತ್ತುಪಡಿಸಿಕೊಂಡಿರುವ ಒಂದು ಕೋಲು ಮೌಲ್ಯರಹಿತವಾಗಿದ್ದು, ಮೇಲ್ಮನವಿ ಅವದಿ ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚುಪಡಿಸಿದ ನಂತರ, ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ ದಿನಾಂಕ: 02 ನೇ ಏಪ್ರಿಲ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಹೇಮಾ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

## ಅನುಬಂಧ

1) ಅಭಿಯೋಜನಾ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು :-

| | | |
|---|---|---|
| ಪ್ರಾಸಾ-೧ | : | ಸಂಧ್ಯಾ |
| ಪ್ರಾಸಾ-೨ | : | ಶಿಲ್ಪ |
| ಪ್ರಾಸಾ-೩ | : | ಲಕ್ಷ್ಮಿ |
| ಪ್ರಾಸಾ-೪ | : | ನಾಗರಾಜ |

2) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ದಾಖಲಾತಿಗಳು:-

| | | |
|---|---|---|
| ನಿಪಿ.೧ | : | ದೂರು. |
| ನಿಪಿ.೧(ಎ) | : | ಸಾಕ್ಷಿ ಸಹಿ |
| ನಿಪಿ.೨ | : | ಸ್ಥಳ ಪಂಚನಾಮೆ |
| ನಿಪಿ.೨(ಎ) | : | ಸಾಕ್ಷಿ ಸಹಿ |
| ನಿಪಿ.೩ ರಿಂದ ೫ | : | ಸಾಕ್ಷಿ ಹೇಳಿಕೆ |

3) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ಮುದ್ದೆಮಾಲು:

-: ಇಲ್ಲಾ :-

4) ಆರೋಪಿ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ಗುರುತಿಸಲಾಗಿದ ದಾಖಲಾತಿಗಳ

-: ಇಲ್ಲಾ :-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.